

## ನಡೆದದ್ದೇ ದಾರಿ

ಶಿಖರ ಹತ್ತುವಾಗ ಇಳಿಯುವಾಗ ಆಕಾಶದಿಂದ ಉದುರಿ ನಡುವಂತರದಲ್ಲಿ ಸಿಕ್ಕಿಹಾಕಿಕೊಂಡಂತಿರುವ ಅನೇಕ ಹಳ್ಳಿಗಳು ಕಂಡವು. ಅವುಗಳಿಗೆ ಹೋಗಿ ಬರಲು ದಾರಿ ಇದೆಯೆ? ಎಂದು ಕೇಳಿದ್ದಕ್ಕೆ ಪವಾರ್, 'ಅವಕ್ಕೆಲ್ಲ ದಾರಿ ಇರಲ್ಲ. ಎಲ್ಲ ತಲೆಯ ಮೇಲೆ ಹೊತ್ತು ಕಾಲಲ್ಲಿಯೇ ನಡೆದು ಸೇರಬೇಕು. ಅವರು ಅಲ್ಲಿ ನೂರಾರು ವರುಷಗಳಿಂದ ಇದ್ದಾರೆ' ಎಂದರು. ಬೆಟ್ಟ ಸವರಿ ಮಾಡಿಕೊಂಡಿರುವ ಒಂದಿಷ್ಟು ನೆಲ, ಬೆಟ್ಟವು ಕೊಡುವ ನೀರು, ಈ ಎರಡನ್ನೇ ನೆಚ್ಚಿಕೊಂಡು ಬದುಕುತ್ತಿರುವ ಅವರ ಬದುಕಿನ ಬಗೆಗೆ ಯಾವ ಕಾಮೆಂಟನ್ನೂ ಮಾಡಲು ತೋಚಲಿಲ್ಲ.

ಕನ್ನಡದ ಹೆಸರುಗಳು. ಅದಕ್ಕೆ ಕಾರಣವಿದೆ. ಮತ್ಸ್ಯೇಂದ್ರನಾಥನ ಮೂಲ ಆವರಣವಾದ ಮಂಗಳೂರಿನ ಕದಿರಿಯಿಂದ ಆರಂಭವಾದದ್ದು ಬೌದ್ಧ ನಾಥಪಂಥದ ಮಹಾಯಾನ. ಮಂಜುನಾಥ, ಸೋಮನಾಥ, ಭೈರವನಾಥನ ಈ ನಾಡಿನಿಂದ ಹೊರಟ ನಾಥಪಂಥದ ತಾತ್ವಿಕತೆ ಕೇದಾರನಾಥ, ಬದರಿನಾಥ, ಕಾಶಿವಿಶ್ವನಾಥ, ನೇಪಾಳದ ಪಶುಪತಿನಾಥನವರೆಗೆ ವ್ಯಾಪಿಸಿದೆ. ಇದರ ಜೊತೆಗೆ ಕನ್ನಡದ ಆವರಣವೂ ಪ್ರಯಾಣಿಸಿರುವ ಚಹರೆಗಳು ಇವೆ. ಅದು ಆ ಹೊತ್ತಿನ ಪ್ರಯಾಣವಾದರೆ, ಇದು ಈ ಹೊತ್ತಿನ ಚಾರಣ.

ಒಟ್ಟು 22 ಜನರಿದ್ದ ನಮ್ಮ ಚಾರಣದ ವ್ಯವಸ್ಥೆಯನ್ನು ಮಾಡಿದ್ದು ಮೌಂಟೇನ್ ಮಂಜು ಮತ್ತು ಗೆಳೆಯರು ನಿರ್ವಹಿಸುತ್ತಿರುವ 'ಕರ್ನಾಟಕ ಹೈಕ್ಸ್' ಎಂಬ ಚಾರಣ ಸಂಸ್ಥೆ. ಇದು ಕಿರಿಯರಿಗೆ ಗೆಳೆಯರಾಗಿ, ಹಿರಿಯರಿಗೆ ಮಕ್ಕಳಾಗಿ ಚಾರಣಿಗರ ಹೆಜ್ಜೆಗಳನ್ನು ಕಣ್ಣಪಾಪೆಯ ತೆರದಲ್ಲಿ ನೋಡುತ್ತ ಸಾಗುವ ಹತ್ತಾರು ಗೆಳೆಯರ ತಂಡ. 2021ರ ಏಪ್ರಿಲ್ 12ರಂದು ನಮ್ಮ ಪ್ರಯಾಣ ಆರಂಭವಾದದ್ದು ಋಷಿಕೇಶದಿಂದ. ಸುಮಾರು 270 ಕಿ.ಮೀ. ಗುಡ್ಡಗಾಡಿನ ದಾರಿಯನ್ನು ಕ್ರಮಿಸಿ ಹಿಮಾಲಯದ ಅಂತರಂಗದಂತಿರುವ ಸಾಂಕ್ರಿ ಎಂಬ ಹಳ್ಳಿಗೆ ತಲುಪಬೇಕು. ಒಟ್ಟು 8ರಿಂದ 10 ಗಂಟೆಗಳ ಪ್ರಯಾಣ. ಗಂಗಾ, ಯಮುನಾ, ಅಲಕನಂದಾ, ಭಾಗೀರಥಿ, ಪಾರ್ವತಿ ನದಿಗಳ ಉಪನದಿಗಳೂ ಸೇರಿದಂತೆ ನೂರಾರು ನದಿಗಳ ಹರಿವಿನ ಜೊತೆಗೆ ಹಿಮಾಲಯದಲ್ಲಿ ಪ್ರಯಾಣ ಮಾಡುವ ಅನುಭವವೇ ಬೇರೆ. ನಮ್ಮ ದಾರಿಗುಂಟ ಇದಿರಾದ ನದಿಗಳೆಂದರೆ ಯಮುನಾ ಮತ್ತು ಅದರ ಉಪನದಿಯಾದ ತೋನ್ಸ್. ಸಾಂಕ್ರಿ ಹಳ್ಳಿ ಸುಮಾರು 80 ಕಿ.ಮೀ. ಇರುವಾಗಲೇ ಇಂಟರ್ನೆಟ್ ಸಂಪರ್ಕ ನಿಂತುಹೋದದ್ದರಿಂದ ಎದುರಿಗೆ ಇರುವವರ ಜೊತೆಗೆ ಮಾತುಕತೆ ಶುರುವಾಯಿತು.

ಏಳರಿಂದ ಹನ್ನೆರಡು ವಯಸ್ಸಿನ ನಾಲ್ಕು ಮಕ್ಕಳೂ ಇದ್ದ ಗುಂಪಿನಲ್ಲಿ ನಾನೇ ಅರವತ್ತು ದಾಟಿದ ಹಿರಿಯ. ಇನ್ನು ನನ್ನ ಸಂಗಾತಿ ಲತಾ ಉತ್ಸಾಹದಿಂದ ಪುಟಿಯುತ್ತಿದ್ದುದರಿಂದ ವಯಸ್ಸಿನ ಹಂಗು ಹರಿದಿತ್ತು. ಒಟ್ಟು ಹತ್ತು ಜನ ಮಹಿಳೆಯರಿದ್ದದ್ದರಿಂದ ಗುಂಪಿನ ಯಜಮಾನಿಕೆ ಅವರ ಪಾಲಾಗಿತ್ತು. ಇವರಲ್ಲಿ ಕೆಲವು ತಾಯಂದಿರು ತಮ್ಮ ಮಕ್ಕಳೊಡನೆ ಚಾರಣಕ್ಕೆ ಬಂದಿದ್ದವರು. ದೈಹಿಕವಾಗಿ, ಮಾನಸಿಕವಾಗಿ ಹಗುರಾಗಿರುವ ಅಥರ್ವ, ಅರ್ಣವ, ಆದಿತ್ಯ, ಮತ್ತು ಶೌರ್ಯ ಈ ನಾಲ್ಕೂ ಮಕ್ಕಳು ಕಾಡಲ್ಲಿ ಕಾಡಾಗಿ, ನದಿಯಲ್ಲಿ ನದಿಯಾಗಿ ಬೆಟ್ಟದಲ್ಲಿ ಬೆಟ್ಟವಾಗಬಲ್ಲವರು. ಅವರಿಗಿಂತ ತುಸುವೇ ದೊಡ್ಡವರಾದ ವಿಘ್ನೇಶ್ ಮತ್ತು ತುಷಾರ್ ನಮ್ಮ ಮಾರ್ಗದರ್ಶಿ ಮುಂದಾಳುಗಳು. ಸ್ನೇಹ ವಿಶ್ವಾಸಗಳನ್ನೇ ಉಸಿರಾಡುತಿದ್ದ ಇಬ್ಬರೂ ಹಿಮಾಲಯದ ಸಣ್ಣ ತುಣುಕುಗಳಂತಿದ್ದರು. ನಾವು ಸಾಂಕ್ರಿ ತಲುಪಿದಾಗ ಸಂಜೆ ಆಗುತ್ತಿತ್ತು. ಅದೊಂದು ಪುಟ್ಟ ಹಳ್ಳಿಯಾದರೂ ಹರ್ ಕಿ ಧುನ್, ದೇವಕಿಯಾರ್, ಕಾಲಾನಾಗ್, ವಿಜಯಾ ಟಾಪ್ ಮುಂತಾದ ಸುಮಾರು ನಲವತ್ತು ಚಾರಣಗಳ ಆರಂಭದ ಬಿಂದು. ಚಾರಣಕ್ಕೆ ಬೇಕಾದ ಸಾಮಾನು ಸರಂಜಾಮುಗಳು, ಗೈಡ್‌ಗಳು, ಇರಲು ಹೋಟೆಲ್‌ಗಳು ಇದ್ದು, ಬಹುಪಾಲು ಚಾರಣ ಉದ್ಯೋಗವನ್ನೇ ನೆಚ್ಚಿಕೊಂಡಿವೆ.

### ಶುರುವಾಯ್ತು ಚಾರಣ

ಸಾಂಕ್ರಿ ಇರುವುದು ಸುಮಾರು ಸಮುದ್ರಮಟ್ಟದಿಂದ 6450 ಅಡಿ ಎತ್ತರದಲ್ಲಿ. ಅಲ್ಲಿಂದ ಬೆಳಿಗ್ಗೆ ಎಂಟಕ್ಕೆ ಆರಂಭವಾದ ನಮ್ಮ ಮೊದಲ ದಿನದ ಚಾರಣದ ಮೊದಲ ತಂಗುದಾಣ ಜುಡಾ ಕಾ ತಾಲಾಬ್ ಎಂಬ ಪುಟ್ಟ ಸರೋವರದ ತಟ. ಚಳಿಗಾಲದಲ್ಲಿ ಸಂಪೂರ್ಣ ಹೆಪ್ಪುಗಟ್ಟುವ ಇದು ಉಳಿದ ಕಾಲದಲ್ಲಿ ನಮ್ಮ ಬಳಕೆಗೆ ನೀರನ್ನು ಒದಗಿಸುತ್ತದೆ. ಮೊದಲ ದಿನ ಸುಮಾರು ಆರೇಳು ಕಿ.ಮೀ.ಗಳ ದೂರದ ಪ್ರಯಾಣ. ಮಧ್ಯಾಹ್ನದ ಹೊತ್ತಿಗೆ ಚಾರಣ ಮುಗಿದು ಅಲ್ಲಿನ ಪುಟ್ಟ ಟೆಂಟುಗಳಲ್ಲಿ ವಿಶ್ರಾಂತಿ ಮತ್ತು ತಂಗುವಿಕೆ. ನಮ್ಮ ಜೊತೆ ಮತ್ತು ಬಹುಪಾಲು ಎಲ್ಲ ಚಾರಣಗಳ

## ಅಜ್ಜಿಯ ಮನೆ!

ಸಾಂಕ್ರಿ, ಒಂದು ಕುಗ್ರಾಮ. ಮರದಲ್ಲಿ ಕಟ್ಟಿದ ಪುಟ್ಟ ಪುಟ್ಟ ಮನೆಗಳು. ಸುಮಾರು ನೂರು ವಯಸ್ಸನ್ನು ದಾಟಿರಬಹುದಾದ ಥೇಟ್ ಪ್ರಶ್ನಾರ್ಥಕ ಚಿಹ್ನೆಯನ್ನು ಅಭಿನಯಿಸಿ ತೋರುವಂತಿದ್ದ ಮುದುಕಿಯೊಂದು ತನ್ನ ಮರದ ಮನೆಯ ಮೆಟ್ಟಿಲನ್ನು ಲೀಲಾಜಾಲವಾಗಿ ಏರುತ್ತಿತ್ತು. ಆ ಮನೆಯನ್ನು ತೋರಿಸಿ, 'ನಿಮ್ಮ ಮನೆಯಾ?' ಎಂದು ಅಚ್ಚಗನ್ನಡದಲ್ಲಿ ಕೇಳಿದೆ. ಮುದುಕಿ ತಕ್ಷಣವೇ ಪಕ್ಕದಲ್ಲಿದ್ದ ಒಂದು ಸಣ್ಣ ಕುರೂಪಿ ಸಿಮೆಂಟ್ ಕಟ್ಟಡವನ್ನು ತೋರಿಸಿ 'ಅದು' ತನ್ನ ಮನೆಯೆಂದೂ ಹೊಸದಾಗಿ ಕಟ್ಟಿಸಿದ್ದೆಂದೂ ಹೆಮ್ಮೆಯಿಂದ ಘಡವಾಲಿಯಲ್ಲಿ ಉಲಿಯಿತು. ನಾವು ಕೊಟ್ಟಿರುವ ಈ ದುಷ್ಟ ಸಮೀಕರಣಕ್ಕೆ ನನಗೆ ನಾಚಿಕೆಯಾಯಿತು.